# ಕಥನ ಮರೆತ ಮಾಧ್ಯಮಗಳು

ಟೀವಿ ರಿಮೋಟ್ ಒತ್ತುತ್ತ ಕೂತ ಪ್ರೇಕ್ಷಕರಿಗೆ ಕನ್ನಡದ ಒಂದೇ ಒಂದು ವಾಹಿನಿಯ ಮೇಲೆ ಕಣ್ಣು ನಿಲ್ಲುವುದಿಲ್ಲ. ಕನ್ನಡದ ಸುದ್ದಿ ವಾಹಿನಿಗಳಲ್ಲಿ 'ಕೂಗುಮಾರಿ'ಗಳು ತಮ್ಮ ಎಂದಿನ ಅರಚಾಟದಲ್ಲಿ ತೊಡಗಿದ್ದರೆ, ಮನರಂಜನೆಯ ವಾಹಿನಿಗಳು ಎರಡೆರಡು ಸೆಟಪ್‌ಗಳ, ಅಕ್ರಮ ಸಂಬಂಧಗಳ, ಪತಿಯೇ ಪರದೈವ ಎನ್ನುವ ಹಳೆಯ ಗುಜರಿಯಿಂದ ಎತ್ತಿತಂದ ಕತೆಗಳನ್ನು ಪ್ರೇಕ್ಷಕರ ಮೇಲೆ ಎರಚುತ್ತಿರುತ್ತವೆ. ರೋಚಕತೆ ಟೀವಿ ವಾಹಿನಿಗಳ ಸರಕಾಗಿದೆ. ಪ್ರತಿಕ್ಷಣ ನೋಡುಗರನ್ನು ರೋಮಾಂಚನ, ಉದ್ವೇಗಗೊಳಿಸುವ ಪ್ರಯತ್ನ ಬಹುಪಾಲು ಟೀವಿ ವಾಹಿನಿಗಳದ್ದು. ಆದ್ದರಿಂದಲೇ ಅವು ಪ್ರೇಕ್ಷಕರನ್ನು ಸೆಳೆಯುವಲ್ಲಿ ಕ್ಷಣಕ್ಷಣಕ್ಕೂ ವಿಫಲವಾಗುತ್ತಿವೆ. ರೋಚಕತೆಗೆ ಹಸಿದು ಕೂತವರನ್ನು ತೃಪ್ತಿಗೊಳಿಸುವುದು, ಅವರ ನಿರೀಕ್ಷೆಗಳು ಹುಸಿಹೋಗದಂತೆ ಹಿಡಿದಿಡುವುದು ಸುಲಭವೇನಲ್ಲ. ಅದೊಂದು ರೀತಿಯಲ್ಲಿ ಮಕ್ಕಳು ಐಸ್‌ಕ್ರೀಮ್ ತಿಂದಂತೆ. ತಿಂದದ್ದಷ್ಟೇ ಗೊತ್ತು, ಮಕ್ಕಳು ಮತ್ತೂ ಬೇಕೆನ್ನುತ್ತವೆ.

ಇಂತಹ ಉರಿಯ ಪೇಟೆಯಲ್ಲಿ ಪತಂಗಗಳನ್ನು ಮಾರುವುದು ಕಡುಕಷ್ಟದ ಕೆಲಸ. ಒಂದು ವಾಹಿನಿಯ ರಿಯಾಲಿಟಿ ಷೋ ಮರುದಿನವೇ ಹಳಸಿರುತ್ತದೆ. ರಂಗಬಿರಂಗಿನ ಹೊಸ ಷೋ ಒಂದು ಬೇರೊಂದು ವಾಹಿನಿಯಲ್ಲಿ ಶುರುವಾಗುತ್ತದೆ. ಪ್ರೇಕ್ಷಕರು ತಮ್ಮ ಟೆಂಟ್ ಅನ್ನು ತಾತ್ಕಾಲಿಕವಾಗಿ ಅಲ್ಲಿ ಹೂಡುತ್ತಾರೆ. ಇದು ಒಂದೆರಡು ದಿನಗಳ ಕತೆಯಲ್ಲ; ಅದು ಪ್ರತಿ ನಿತ್ಯ ತುಕ್ಕು ಹಿಡಿದ ಕನಸುಗಳನ್ನು ಬೇರೆ ಬಣ್ಣ ಬಳಿದು ಮಾರುವುದೇ ಆಗಿದೆ.

ಇವೆಲ್ಲದರ ಹಿಂದೆ ಅಪಾರವಾದ ದುಡ್ಡು, ದೊಡ್ಡ ಮಾರುಕಟ್ಟೆ ಇದೆ. ಇವುಗಳ ಹೊರತಾಗಿಯೂ ಈ ವಾಹಿನಿಗಳಿಗೆ ತಾವು ಕೊಡುವ ಕಾರ್ಯಕ್ರಮಗಳ ಬಗ್ಗೆ ನಂಬಿಕೆ ಇಲ್ಲದ್ದು ಮೊದಲಿಗೇ ಕಾಣುತ್ತದೆ. ಟೀವಿ ಧಾರಾವಾಹಿಗಳು ವೈದಿಕತೆಯ ಮೌಲ್ಯಗಳನ್ನು ಪ್ರತಿಬಿಂಬಿಸುವುದು ಮಾತ್ರವಲ್ಲ, ಏಕರೂಪಿ ಸಂಸ್ಕೃತಿಯನ್ನು ಹೇರುತ್ತಲೇ ಬಂದಿವೆ. ಅವುಗಳಿಗೆ ಇನ್ನೂ ದಲಿತ, ಶೂದ್ರ ಸ್ಪರ್ಶ ಸಿಕ್ಕಂತೆ ಕಾಣುವುದಿಲ್ಲ. ಅವುಗಳಲ್ಲಿ ಇರುವುದು ಕತೆಯಲ್ಲ, ಒಂದು ವಸ್ತು ಮಾತ್ರ. ಹಾಗಾಗಿಯೇ ಮನುಷ್ಯ ಬದುಕನ್ನು ತಣ್ಣಗೆ ಹೇಳುವ ಕಥನವನ್ನು ಅವು ಕಳೆದುಕೊಂಡಿವೆ. ರೋಚಕತೆಗೆ ನೇಣುಹಾಕಿಕೊಂಡ ಅವು ಕಥನಕ್ಕಿರುವ ಅರ್ಥದ ಹಲವು ಪದರು, ಆಯಾಮಗಳನ್ನು ಬಿಟ್ಟಿದ್ದರಿಂದಲೇ ನೀರಸವಾಗಿವೆ. ಭಾರತವನ್ನು ಇಲ್ಲಿಯ ತನಕ ಪೊರೆದದ್ದು ರಾಮಾಯಣ, ಮಹಾಭಾರತ, ಜನಪದ ಕತೆ ಕಾವ್ಯಗಳು ಎಂಬುದನ್ನು ನಾವು ಮರೆಯದಿರೋಣ. ಟ್ಯಾಬ್ಲಾಯ್ಡ್ ಪತ್ರಿಕೋದ್ಯಮದ ವಿಸ್ತರಣೆಯಾಗಿರುವ ಸುದ್ದಿವಾಹಿನಿಗಳು ವ್ಯಕ್ತಿಗಳ ಖಾಸಗಿ ಬದುಕಿನಲ್ಲಿ ಇಣುಕಿ, ಬಾಯಿಗೆ ಬಂದಂತೆ ಬೀದಿಯ ಗದ್ದಲ ಮಾಡಿ ಈಗಾಗಲೇ ಜನರ ವಿಶ್ವಾಸ ಕಳಕೊಂಡಿವೆ. ಆದ್ದರಿಂದಲೇ ಅನೇಕ ಕನ್ನಡ ವಾಹಿನಿಗಳನ್ನು ಆಗಾಗ ಬೇಸರ ನೀಗಿಸುವ ಜೋಕರ್‌ಗಳಂತೆ ನೋಡಲಾಗುತ್ತದೆ.

ಇವುಗಳೊಂದಿಗೆ ಸಾಮಾಜಿಕ ಜಾಲತಾಣಗಳು ಕೂಡ ಜನರಲ್ಲಿ ಹತಾಶೆ, ದುಗುಡ, ಏಕಾಂಗಿತನ, ಭ್ರಮೆಗಳನ್ನು ಹೆಚ್ಚಿಸುತ್ತಲೇ ಇವೆ. ಅವು ನಿಂತಿರುವ ನೆಲೆಯೇ ಪೊಳ್ಳಾದದ್ದು. ಜನರ ನವಮಾಧ್ಯಮ ಎಂದೇ ಪರಿಗಣಿಸಲಾಗಿದ್ದ ಈ ಮಾಧ್ಯಮಗಳು ಅದನ್ನು ಬಳಸುವವರ ಭಾವಕೋಶವನ್ನು, ಒಳಗಿನ ಸಂಪತ್ತನ್ನು ಬರಿದು ಮಾಡುತ್ತಿವೆ. ಇವೆಲ್ಲವೂ ಕೊನೆಗೆ ಎಲ್ಲಿಗೆ ಹೋಗಿ ನಿಲ್ಲುತ್ತವೆ ಎಂಬುದರ ಸ್ಪಷ್ಟಚಿತ್ರಣ ಯಾರಲ್ಲೂ ಇಲ್ಲ. ಹೊಸ ಕೋತಿಯ ಹೊಸ ಆಟಕ್ಕೆ ಕಾಯುವವರು ಇರುವ ತನಕ ಇವು ಮುಂದುವರಿಯುತ್ತಲೇ ಹೋಗುತ್ತವೆ.

**ಸಂದೀಪ ನಾಯಕ**

